**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ, ಧಾರವಾಡ.**

**ಸಿಸಿ.ನಂ. 2671/2021**

ಫಿರ್ಯಾದಿ :- ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

**-ಃ ವಿರುದ್ಧ ಃ-**

ಆರೋಪಿ :-

1. ಸಲೀಮ ಸಮೀರ ಇರಾಣಿ @ ಬಿಲಾಲ ಇರಾಣಿ
ವಯಾಃ 22 ವರ್ಷ, ಉಃ ಕಾರ್ಮಿಕ
ಸಾಃ ಫರುಕಿಯಾ ಮಸೀದಿ ಹತ್ತಿರ,
ಇರಾಣಿ ಕಾಲೋನಿ, ಜನ್ನತ್ ನಗರ
ಧಾರವಾಡ.

2. ಆಜಾದ ಪೈರೋಜ ಇರಾಣಿ
ವಯಾಃ 28 ವರ್ಷ, ಉಃ ಕಾರ್ಮಿಕ
ಸಾಃ ಫರುಕಿಯಾ ಮಸೀದಿ ಹಿಂದೆ, 1 ನೇ ಕ್ರಾಸ್,
ಇರಾಣಿ ಕಾಲೋನಿ, ಜನ್ನತ್ ನಗರ
ಧಾರವಾಡ.

3. ಜಫಾರ್ ಹಾಜಿಸಾಬ್ ಇರಾಣಿ
ವಯಾಃ 52 ವರ್ಷ, ಉಃ ಕಾರ್ಮಿಕ
ಸಾಃ ಇರಾಣಿ ಕಾಲೋನಿ, ಜನ್ನತ್ ನಗರ
ಧಾರವಾಡ.

4. ಶ್ರೀಮತಿ ಬಾನು ಜಾಫರ ಇರಾಣಿ
ವಯಾಃ 45 ವರ್ಷ, ಉಃ ಗೃಹಿಣಿ
ಸಾಃ ಇರಾಣಿ ಕಾಲೋನಿ, ಜನ್ನತ್ ನಗರ
ಧಾರವಾಡ.

**ದಂಃಪ್ರಃಸಂಃ ಕಲಂ 313 ರಡಿ ಆರೋಪಿತರ ಹೇಳಿಕೆ.**

**ಪ್ರಶ್ನೆ 1)** ಃ ನೀವು ಫಿರ್ಯಾದುದಾರರ ಪರ ನುಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಆಲಿಸಿದ್ದಿರಾ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 2)** ಪ್ರಾಸಾ-1: ರವರ ಸಾಕ್ಷ್ಯದಲ್ಲಿ ಅಂದಾಜು 3 ವರ್ಷಗಳ ಹಿಂದೆ ಆತ ಧಾರವಾಡದಿಂದ ವನಶ್ರೀ ನಗರಕ್ಕೆ ಹೋಗುತ್ತಿದ್ದಾಗ ಸ್ವಿಮಿಂಗ್ ಪೂಲ್ ಹತ್ತಿರ ಉದಯಗಿರಿಯ ರಸ್ತೆಯಲ್ಲಿ ಹೋಗುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಮೋಟರ್ ಸೈಕಲ್ ಮೇಲೆ ಬಂದು ಆಕೆಯ ಕೊರಳಲ್ಲಿದ್ದ ಬಂಗಾರದ ಚೈನ ದೋಚಿಕೊಂಡು ಪರಾರಿಯಾಗಿದ್ದರು. ಅದರ ತೂಕ 15 ಗ್ರಾಂ ಇತ್ತು. ಸದರಿ ಘಟನೆ ಆದಾಗ ಮಃ 4.00 ಗಂಟೆಯಾಗಿತ್ತು. ಆಕೆಯ ಚೈನ ದೋಚಿಕೊಂಡಿದ್ದ ಮೋಟರ್ ಸೈಕಲ್ ಹಿಂಬದಿ ಸವಾರ ಪಿಂಕ್ ಮತ್ತು ಬ್ರೌನ್ ಬಣ್ಣದ ಬಟ್ಟೆ ಧರಿಸಿದ್ದ. ಆತನ ವಯಸ್ಸು ಅಂದಾಜು 23-24 ವರ್ಷ ವಯಸ್ಸು ಇತ್ತು. ಆತ ಮಾಸ್ಕ ಮತ್ತು ಗಾಗಲ್ ಧರಿಸಿದ್ದ. ಅದೇ ದಿನ ನಾನು ಪೋಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿದ್ದೆ. ಸದರಿ ದೂರನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ-ಪಿ-1 (ಎ) ಎಂದು ಗುರುತಿಸಲಾಯಿತು . ಪೋಲಿಸರಿಗೆ ಗುನ್ನಾ ಸ್ಥಳವನ್ನು

ಆಕೆಯೆ ತೋರಿಸಿದ್ದೆ . ಆಗ ಸದರಿ ಸ್ಥಳಕ್ಕೆ ಪೋಲಿಸರು ಬಂದು ವಿಚಾರಣೆ ಮಾಡಿ ಬರವಣಿಗೆ ಮಾಡಿದ್ದರು . ಅದಕ್ಕೆ ಆಕೆಯ ಸಹಿ ಪಡೆದಿದ್ದರು . ಸದರಿ ಪಂಚನಾಮೆಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-2 ಎಂದು , ಅದರಲ್ಲಿರುವ ಆಕೆಯ ಸಹಿಯನ್ನು ನಿಶಾನೆ-ಪಿ-2 (ಎ) ಎಂದು ಗುರುತಿಸಲಾಯಿತು . ಅದೇ ಕಾಲಕ್ಕೆ ಪೋಟೋಗಳನ್ನು ಸಹ ತೆಗೆದಿದ್ದರು . ಅವುಗಳನ್ನು ಈಗ ನೋಡಿ ಗುರುತಿಸಿದ್ದು ಅವುಗಳನ್ನು ನಿಶಾನೆ-ಪಿ-3 ಮತ್ತು 4 ಎಂದು ಗುರುತಿಸಲಾಯಿತು . ಆಕೆಯ ಚೈನ ಅವಲಕ್ಕಿ ಮಾಟದಾಗಿತ್ತು . ಒಂದು ವರ್ಷದ ನಂತರ ಆಕೆಯ ಚೈನ ಸಿಕ್ಕಿದೆ ಎಂದು ಹೇಳಿ ಪೋಲಿಸರು ಬೆಂಗಳೂರಿನಲ್ಲಿ ನನಗೆ ಗಟ್ಟಿ ಬಂಗಾರ ನೀಡಿದ್ದ ರು . ಆ ಕಾಲಕ್ಕೆ ಒಂದು ಪೋಟೊ ತೆಗೆದಿದ್ದರು . ಅದನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-5 ಎಂದು ಗುರುತಿಸಲಾಯಿತು ಎಂದು ಸಾಕ್ಷೀ ಹೇಳಿ ರುತ್ತಾನೆ, ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 3)** ಪ್ರಸಾ 4: ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ಆಕೆಯ ತಾಯಿ . ದಿಃ 29-5-2020 ರಂದು ಸಾಯಂಕಾಲ 4.30 ಗಂಟೆಗೆ ಆಕೆಯ ತಾಯಿ ಧಾರವಾಡದಿಂದ

ಅವರ ಮನೆ ಕಡೆಗೆ ಬರುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಮೋಟರ್ ಸೈಕಲ್ ಬಂದು ಸದರಿ ಮೋಟರ್ ಸೈಕಲ್ ಹಿಂಬದಿ ಸವಾರ ಆಕೆಯ ತಾಯಿಯ ಕೊರಳಲ್ಲಿದ್ದ ಬಂಗಾರದ ಸರ ದೋಚಿಕೊಂಡು ಪರಾರಿಯಾಗಿದ್ದರು . ಸದರಿ ಘಟನೆ ವನಶ್ರೀ ನಗರದ , ನೀರಲಕಟ್ಟಿ ಪ್ಲಾಟ ಹತ್ತಿರ ಆಗಿತ್ತು . ಸದರಿ ಘಟನೆಗೆ ಸಂಬಂಧಿಸಿದಂತೆ ಆಕೆಯ ತಾಯಿ ಪೋಲಿಸರಿಗೆ ದೂರು ನೀಡಿದ್ದಳು . ಸದರಿ ಘಟನೆಯಾದ 6-7 ತಿಂಗಳ ನಂತರ ಆಕೆಯ ತಾಯಿಯ ಸದರಿ ಸರ ಬೆಂಗಳೂರಿನಲ್ಲಿ ಸಿಕ್ಕಿದೆ ಎಂದು ಪೋಲಿಸರು ತಿಳಿಸಿದ್ದರು . ಆದ್ದರಿಂದ ಆಕೆ ತನ್ನ ತಾಯಿಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಪೋಲಿಸ್ ಠಾಣೆಗೆ ಹೋಗಿದ್ದೆವು . ಅಲ್ಲಿ ಪೋಲಿಸರು ಅವರಿಗೆ ಗಟ್ಟಿ ಬಂಗಾರ ಕೊಟ್ಟಿದ್ದರು . ಅಲ್ಲಿ ಒಂದು ದಾಖಲೆಗೆ ಸಹಿ ಮಾಡಿ ಪಡೆದುಕೊಂಡಿದ್ದೆವು . ಆ ಕಾಲಕ್ಕೆ ಆಕೆ ಸಹಿ ಮಾಡಿರುವ ಸದರಿ ದಾಖಲೆಯ ದೃಡೀಕೃತ ನಕಲನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-6 ಎಂದು ಗುರುತಿಸಲಾಯಿತು . ಅದೇ ಕಾಲಕ್ಕೆ ನಿಶಾನೆ-ಪಿ-5 ರ ಪೋಟೋ ತೆಗೆದಿದ್ದರು ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 4)** ಪ್ರಸಾ7.ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣ ಆರೋಪಿ ಸಲಿಮ ಇರಾಣಿ ಎನ್ನುವವನನ್ನು ಅವರ ಠಾಣೆಯ ಸಿಬ್ಬಂದಿಗಳು ಠಾಣಾ ಗುನ್ನಾ ನಂಃ

158/2020 ಮತ್ತು 169/2020ರ ತನಿಖೆಗಾಗಿ ಧಾರವಾಡಕ್ಕೆ ಬಂದಾಗ ಸದರಿ ಆರೋಪಿ ಅವರ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದ್ದ. ಆ ಬಗ್ಗೆ ಧಾರವಾಡ ಶಹರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸದರಿ ಆರೋಪಿತನನ್ನು ಧಾರವಾಡ ಶಹರ ಪೋಲಿಸರು ದಸ್ತಗಿರಿ ಮಾಡಿದಾಗ ಅವರ ಠಾಣೆಯ ಸದರ ಪ್ರಕರಣ ವಿಚಾರಣೆಗಾಗಿ ಸದರಿ ಆರೋಪಿತನನ್ನು ಬಾಡಿ ವಾರಂಟ್ ಮೇಲೆ ಪಡೆದುಕೊಂಡು ವಿಚಾರಣೆಗಾಗಿ ಅವರ ಠಾಣೆಗೆ ಕರೆದುಕೊಂಡು ಬಂದಿದ್ದರು. ಸದರಿ ಆರೋಪಿತನನ್ನು ವಿಚಾರಿಸಿದಾಗ ಅವರು ಬೆಂಗಳೂರಿನ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ಮಹಿಳೆಯ ಸರ ಸುಲಿಗೆ ಮಾಡಿ ಅಪರಾಧ ಮಾಡಿರುವುದು ತಿಳಿದು ಬಂದಿತ್ತು. ಸದರಿ ಆರೋಪಿ ಆತನ ಜೊತೆ ಇತರೇ ಆರೋಪಿತರು ಶಾಮಿಲಾಗಿದ್ದಾರೆ ಎಂದು ಹೇಳಿದ್ದ. ಆದ್ದರಿಂದ ಸದರಿ ಆರೋಪಿತರ ಪತ್ತೆಗಾಗಿ ಪಿಡಬ್ಲ್ಯೂ - 07 ಮತ್ತು ವಿಜಯ ನಗರ ಪೋಲಿಸ್ ಠಾಣೆಯ ಅಪರಾಧ ದಳದ ಸಿಬ್ಬಂದಿಗಳಾದ ಚಾಸಾ-13, 15 ರಿಂದ 18 , 20, 21 ರವರು ಹಾಗೂ ಇತರೇ ಸಿಬ್ಬಂದಿಗಳು ಸೇರಿ ಧಾರವಾಡಕ್ಕೆ ಬಂದಿದ್ದರು. ಅವರು ಧಾರವಾಡದಲ್ಲಿರುವ ಇರಾಣಿ ಕಾಲನಿಗೆ ಹೋಗಿದ್ದೆವು . ಅಲ್ಲಿ ಅವುನು ಇರಾಣಿ , ಆಜಾದ ಇರಾಣಿ , ಭಾನು ಇರಾಣಿ, ಪಾತಿಮಾ ಅಕ್ತರ ಮತ್ತು ಗುಲ್ಜಾರ ರವರನ್ನು ವಿಚಾರಣೆಗಾಗಿ ಅವರ ಠಾಣೆಗೆ ಕರೆದುಕೊಂಡು ಹೋಗಿದ್ದರು. ಆ ದಿನ ನಾವು ವಿಚಾರಣೆಗೆ ಕರೆದುಕೊಂಡು ಹೋದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಅವರ ಹೆಸರು ಭಾನು ಇರಾಣಿ ಹಾಜರಿದ್ದಾರೆ ಎಂದು ಉತ್ತರಿಸಿರುತ್ತಾರೆ . ಸದರಿ

ಆರೋಪಿತರನ್ನು ವಿಚಾರಿಸಿದಾಗ ಅವರು ಸರಗಳ್ಳತನ ಮಾಡಿರುವ ಸರಗಳನ್ನು ಬಂಗಾರದ ಅಂಗಡಿಗಳಲ್ಲಿ ಅಡುವು ಇಟ್ಟಿರುವುದಾಗಿ ತಿಳಿದು ಬಂದಿತ್ತು. ಆರೋಪಿತರು ಅಡುವು ಇಟ್ಟ ಆಭರಣಗಳ ಅಂಗಡಿಗಳನ್ನು ತೊರಿಸುವುದಾಗಿ ಹೇಳಿದ್ದರಿಂದ ದಿಃ 17.12.2020 ರಂದು ಆರೋಪಿತರಾದ ಭಾನು ಇರಾಣಿ ಮತ್ತು ಪಾತಿಮಾ ಅತ್ತರ ಇವರನ್ನು ಕರೆದುಕೊಂಡು ನಾನು , ಚಾಸಾ-15 , 20 ರಿಂದ 23, 25 ರಿಂದ 32 ರವರು ಧಾರವಾಡದ ಶಹರ ಪೋಲಿಸ್ ಠಾಣೆಗೆ ಬಂದಿದ್ದರು . ನಂತರ ಆರೋಪಿತರು ನೀಡಿದ ಮಾಹಿತಿ ಮೇರೆಗೆ ಶಿವಾಜಿ ನಗರದಲ್ಲಿದ್ದ ಬಂಗಾರದ ಅಂಗಡಿಗಳಿಗೆ ಹೋಗಿದಾಗ ಸಂದರಿ ಆರೋಪಿತರು ಸದರಿ ಅಂಗಡಿಯ ಮಾಲೀಕರನ್ನು ತೊರಿಸಿ ಅವರಿಗೆ ಆರೋಪಿತರು ಕಳುವು ಮಾಡಿದ ಬಂಗಾರದ ಆಭರಣಗಳನ್ನು ನೀಡಿರುವುದಾಗಿ ಹೇಳಿದ್ದರು. ಅವರು ಗಣಪತಿ ಜುವೆಲರ್ಸ ಅಂಗಡಿಗೆ ಹೋಗಿದ್ದೆವು. ಸದರಿ ಅಂಗಡಿಯ ಮಾಲೀಕ ಆ ದಿನ ಒಟ್ಟು 16 ವಡವೆಗಳನ್ನು ನಮ್ಮ ಸಮಕ್ಷಮ ಹಾಜರುಪಡಿಸಿದ್ದ. ಅವುಗಳನ್ನು ಪಿ ಐ ರವರು ಜಪ್ತುಪಡಿಸಿಕೊಂಡಿದ್ದರು. ಆಗ ಸದರಿ ಸ್ಧಳದಲ್ಲಿ ಪಂಚನಾಮೆ ಮಾಡಿದ್ದರು. ಅದರ ದೃಡೀಕೃತ ನಕಲನ್ನು ನಾನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-10 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಾನು ಸಹ ಸಹಿ ಮಾಡಿರುತ್ತೇನೆ. ಅದೇ ಕಾಲಕ್ಕೆ ಪೋಟೋಗಳನ್ನು ಸಹ ತೆಗೆದಿದ್ದರು. ಸದರಿ ಪೋಟೋಗಳನ್ನು ನಿಶಾನೆ-ಪಿ-11 ಮತ್ತು 12 ಎಂದು ಗುರುತಿಸಲಾಯಿತು. ಆ ದಿನ ಜಪ್ತುಪಡಿಸಿಕೊಂಡ ವಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ಚಾಸಾ-4 ಮತ್ತು 5 ರವರು ಪಂಚರಾಗಿ ಹಾಜರಿದ್ದರು.

ನಿಶಾನೆ-ಪಿ-12 ರ ಫೋಟೋದಲ್ಲಿ ಬಲಗಡೆಯಿಂದ ಎರಡನೇಯವರು ಸದರಿ ಬಂಗಾರದ ಅಂಗಡಿಯ ಮಾಲಿಕರಾಗಿದ್ದರು . ಅವರ ಹೆಸರು ವೆಂಕಟೇಶ ಎಂದು ಇತ್ತು . ಅದೇ ದಿನ ಬೇರೆ ಬೇರೆ ಅಂಗಡಿಯಲ್ಲಿ ಸಹ ವಡವೆಗಳನ್ನು ಜಪ್ತುಪಡಿಸಿಕೊಂಡ್ಡೆವು ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋೇಪಿಃ

2.ನೇ ಆರೋೇಪಿಃ

3.ನೇ ಆರೋೇಪಿಃ

4.ನೇ ಆರೋೇಪಿಃ

**ಪ್ರಶ್ನೆ 5)** ಪ್ರಸಾ-08 ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣ ಆರೋಪಿ ಸಲಿಮ ಇರಾಣಿ ಎನ್ನುವವನನ್ನು ಅವರ ಠಾಣೆಯ ಸಿಬ್ಬಂದಿಗಳು ಅವರ ಠಾಣಾ ಗುನ್ನಾ ನಂಃ 158/2020 ಮತ್ತು 169/2020 ರ ತನಿಖೆಗಾಗಿ ಧಾರವಾಡಕ್ಕೆ ಬಂದಾಗ ಸದರಿ ಆರೋಪಿ ಅವರ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದ್ದ. ಆ ಬಗ್ಗೆ ಧಾರವಾಡ ಶಹರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು . ಸದರಿ ಆರೋಪಿತನನ್ನು ಧಾರವಾಡ ಶಹರ ಪೋಲಿಸರು ದಸ್ತಗಿರಿ ಮಾಡಿದಾಗ ಅವರ ಠಾಣೆಯ ಸದರ ಪ್ರಕರಣ ವಿಚಾರಣೆಗಾಗಿ ಸದರಿ ಆರೋಪಿತನನ್ನು ಬಾಡಿ ವಾರಂಟ್ ಮೇಲೆ ಪಡೆದುಕೊಂಡು ವಿಚಾರಣೆಗಾಗಿ ಅವರ ಠಾಣೆಗೆ ಕರೆದುಕೊಂಡು ಬಂದಿದ್ದರು. ಸದರಿ ಆರೋಪಿತನನ್ನು ವಿಚಾರಿಸಿದಾಗ ಅವರು ಬೆಂಗಳೂರಿನ ಸುತ್ತ

ಮುತ್ತಲಿನ ಪ್ರದೇಶಗಳಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ಮಹಿಳೆಯ ಸರ ಸುಲಿಗೆ ಮಾಡಿ ಅಪರಾಧ ಮಾಡಿರುವುದು ತಿಳಿದು ಬಂದಿತ್ತು. ಸದರಿ ಆರೋಪಿ ಅವರ ಜೊತೆ ಇತರೇ ಆರೋಪಿತರು ಶಾಮಿಲಾಗಿದ್ದಾರೆ ಎಂದು ಹೇಳಿದ್ದ. ಆದ್ದರಿಂದ ಸದರಿ ಆರೋಪಿತರ ಪತ್ತೆಗಾಗಿ ಪಿಡಬ್ಲೂ -07 ಮತ್ತು ವಿಜಯ ನಗರ ಪೋಲಿಸ್ ಠಾಣೆಯ ಅಪರಾಧ ದಳದ ಸಿಬ್ಬಂದಿಗಳಾದ ಚಾಸಾ-14 ರಿಂದ 21, ರವರು ಹಾಗೂ ಇತರೇ ಸಿಬ್ಬಂದಿಗಳು ಸೇರಿ ಧಾರವಾಡಕ್ಕೆ ಬಂದಿದ್ದೆವು. ಅವರು ಧಾರವಾಡದಲ್ಲಿರುವ ಇರಾಣಿ ಕಾಲನಿಗೆ ಹೋಗಿದ್ದರು. ಅಲ್ಲಿ ಅವುನು ಇರಾಣಿ , ಆಜಾದ ಇರಾಣಿ, ಭಾನು ಇರಾಣಿ, ಪಾತಿಮಾ ಅಕ್ತರ ಮತ್ತು ಗುಲ್ಜಾರ ರವರನ್ನು ವಿಚಾರಣೆಗಾಗಿ ಅವರ ಠಾಣೆಗೆ ಕರೆದುಕೊಂಡು ಹೋಗಿದ್ದರು. ಆ ದಿನ ವಿಚಾರಣೆಗೆ ಕರೆದುಕೊಂಡು ಹೋದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಅವರ ಹೆಸರು ಭಾನು ಇರಾಣಿ ಹಾಜರಿದ್ದಾರೆ ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 6)** ಪ್ರಸಾ-11 ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 02-12-2021 ರಂದು ಮಾಗಡಿ ರೋಡ ಪೊಲೀಸ ಠಾಣೆಯ ಅಪರಾದ ಸಂ.158/2020 ರಲ್ಲಿ 1 ನೇ ಆರೋಪಿತನನ್ನು ಬಾಡಿ ವಾರಾಂಟ ಮೇಲೆ ಪಡೆದುಕೊಂಡು ಆತನನ್ನು ವಿಚಾರಿಸಿದಾಗ ಆತ ಬೆಂಗಳೂರು ಮತ್ತು ಬೇರೆ ಬೇರೆ ಕಡೆ ಸರ ಗಳ್ಳ ತನ ಮಾಡಿರುತ್ತೆನೆ ಎಂದು ಮಾಹಿತಿ ತಿಳಿಸಿರುತ್ತಾನೆ. ಆರೋಪಿತರನ್ನು ಪತ್ತೆಮಾಡಲು ಅವರ ಮೆಲಾಧಿಕಾರಿ ಆತನನ್ನು ಸೇರಿಸಿ ಒಂದು ತಂಡವನ್ನು ರಚಿಸಿದ್ದರು. ಚಾಸಾ.39, ಪ್ರಭು ಸ್ವಾಮಿ ಪಿಎಸ್ಐ, ಮಹಾದೇವಯ್ಯಾ ಪಿಎಸ್ ಐ, ರವಿಕುಮಾರ ಎ ಎಸ್ ಐ, ಶೀವಣ್ಣ ಎಚ್ ಸಿ, ಕೃಷ್ಣಪ್ಪ ಎಚ್ ಸಿ, ದಿನೇಶ ಎಚ್ ಸಿ, ಬಸವರಾಜಪ್ಪ ಎಚ್ ಸಿ, ಡಬ್ಲೂ ಪಿ ಸಿ ಪ್ರತಿಭಾ, ರಶ್ಮೀ, ಸುರೇಖಾ ಪಾಟಿಲ, ಬೇಬಿ ಆಯಿಶಾ, ಲಕ್ಷ್ಮೀ, ಇದ್ದರು. ಆರೋಪಿತರನ್ನು ಪತ್ತೆ ಮಾಡಲು 1 ನೇ ಆರೋಪಿತ ಸಮೇತ ಖಾಸಗಿ ವಾಹನದಲ್ಲಿ ದಿಃ 10-12-2020 ರಂದು ಧಾರವಾಡಕ್ಕೆ ಬಂದಿದ್ದರು. ಧಾರವಾಡದ ಇರಾನಿ ಕಾಲನಿಯಲ್ಲಿ ಅವುನು ಇರಾನಿ, ಆಜಾದ ಇರಾನಿ, ಬಾನು ಇರಾನಿ, ಗುಲ್ಜಾರ ಬೇಗಂ, ಫಾತಿಮಾ ಅಕ್ತರ ಅವರನ್ನು ಕರೆದುಕೊಂಡು ದಿಃ 11-12-2020 ರಂದು ಠಾಣೆ ಹಾಜರುಪಡಿಸಿರುತ್ತೆವೆ. ಆರೋಪಿತರು ಮಾಡಿದ ಸರಗಳ್ಳತನ ಮತ್ತು ಮುದ್ದೆಮಾಲನ್ನು ಪತ್ತೆ ಮಾಡಲು ವಿಜಯ ನಗರ ಉಪ ವಿಭಾಗದ ಅಫರಾದ ಪತ್ತೆದಳ ಮತ್ತು ವಿಶೇಷ ತಂಡವನ್ನು ಆತನನ್ನು ಒಳಗೊಂಡತೆ ರಚಿಸಿದ್ದರು. ಸದರಿ ತಂಡದಲ್ಲಿ ಮೇಲೆ ಹೇಳಿದ ಅಧಿಕಾರಿ ಮತ್ತು ಸಿಬ್ಬಂದಿ ಜೊತೆ ಉಮೇಶ ಎಚ್ ಸಿ, ರುಪೇಶ ಎಚ್ ಸಿ, ಶ್ರೀನಿವಾ ಎಚ್ ಸಿ, ಪಲ್ಲವಿ ಮತ್ತು ಜಯಶ್ರೀ ಪಿಸಿ ಅವರನ್ನು ಸೇರಿಸಿ ವಿಶೇಷ ತಂಡವನ್ನು ನನ್ನನ್ನು ಒಳಗೊಂಡತೆ ರಚಿಸಿದ್ದರು. ಪೊಲೀಸ ಅಭಿ ರಕ್ಷೆಯಲ್ಲಿ ಇದ್ದ ಭಾನು ಇರಾನಿ

ಮತ್ತು ಫಾತಿಮಾ ಅಕ್ತರ ಇವರನ್ನು ಕರೆದುಕೊಂಡು ದಿಃ 17-12-2020 ರಂದು ಆರೋಪಿತರು ತೋರಿಸಿದ ಧಾರವಾಡದ ಗಾಂದಿ ಚೈಕಿನಲ್ಲಿರುವ ಬಂಗಾರದ ಅಂಗಡಿಗಳಾದ ಕಾಮಾಕ್ಷಿ ಜುವ್ಯಲರ್ಸ ಅಂಗಡಿಯಲ್ಲಿ 230 ಗ್ರಾಂ ಚಿನ್ನದ ಒಡೆವೆಗಳನ್ನು ದಿಃ19-12-2020 ರಂದು ಅಮಾನತ್ತು ಪಡೆಸಿಕೊಂಡಿರುತ್ತೆವೆ. ದಿಃ 20-12-2020 ರಂದು ಅದೇ ಸರ್ಕಾಲ್ ನಲ್ಲಿರುವ ಗಣಪತಿ ಜುವೆಲರ್ಸ ಒಟ್ಟು 549 ಗ್ರಾಂ ಚಿನ್ನದ ಒಡೆವೆಗಳನ್ನು ಹಾಗೂ ಅದೇ ದಿನ ಕೊಯಿನೂರ್ ಜುವೇಲರ್ಸ ಒಟ್ಟು 99 ಗ್ರಾಂ ಚಿನ್ನದ ಒಡೆವೆಗಳನ್ನು ಅಮಾನತ್ತು ಪಡೆಸಿಕೊಂಡಿರುತ್ತೆವೆ. ದಿಃ21-12-2020 ರಂದು ವರ್ಣ ಸಿಲವರ್ ಜುವೇಲರ್ಸ ನಲ್ಲಿ ಒಟ್ಟು 149 ಗ್ರಾಂ ಅಮಾನತ್ತು ಪಡೆಸಿಕೊಂಡಿರುತ್ತೆವೆ. ಸದರಿ ಅಮಾನತ್ತು ಸಂದರ್ಬದಲ್ಲಿ ಆತ ಆರೋಪಿತರ ಬೆಂಗಾವಲಾಗಿ ಕರ್ತವ್ಯ ನಿರ್ವಹಿಸಿರುತ್ತೆನೆ. ಆರೋಪಿತನನ್ನು ನೋಡಿದರೆ ಗುರುತಿಸಿತ್ತೆನೆ. ಮತ್ತು ಅಂಗಡಿಗಳನ್ನು ನೋಡಿದರೆ ಗುರುತಿಸುತ್ತೆನೆ. ಈಗ ನೋಡುತ್ತಿರು ಪೋಟೊಗಳನ್ನು ಈಗಾಗಲೇ ನಿ.ಪಿ.11 ಮತ್ತು 12 ಎಂದು ಗುರುತಿಸಲಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿದರೆ ಗುರುತಿಸುತ್ತೆನೆ. ಈಗ ನೋಡುತ್ತಿರುವ ಆರೋಪಿತ 1, 2 ಮತ್ತು 4 ಆ ದಿನ ನಾವು ದಸ್ತಗಿರಿ ಮಾಡಿದ ಆರೊಪಿತರು ಆಗಿರುತ್ತಾರೆ ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋೕಪಿಃ

4.ನೇ ಆರೋೕಪಿಃ

**ಪ್ರಶ್ನೆ 7)** ಪ್ರಸಾ-12 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 23-11-2021 ರಂದು ಎಸಿಪಿ ವಿಜಯ ನಗರ ಅಪರಾಧ ಪತ್ತೆ ದಳದಲ್ಲಿ ಕೆಲಸ ಮಾಡುತ್ತಿದ್ದೆನು. ಮಾಗಡಿ ರಸ್ತೆ ಪೊಲೀಸ ಠಾಣೆ ಗುನ್ನಾ ಸಂ.158/2020 ಮತ್ತು 169/2020 ಪ್ರಕರಣಗಳ ಆರೊಪಿತರು ಮತ್ತು ಮುದ್ದೆಮಾಲಗಳ ಪತ್ತೆಗಾಗಿ ಒಂದು ತಂಡವನ್ನು ರಚಿಸಿದ್ದೇವು. ಅವರ ಬಾತ್ಮಿದಾರ ಮಾಹಿತಿ ಮೇರೆಗೆ ಆರೊಪಿತರ ಪತ್ತೆಗಾಗಿ ಹುಬ್ಬಳಿ-ಧಾರವಾಢ ಬೇಳಗಾವಿ ಕಡೆ ಬಂದಿದ್ದೇವು. ದಿಃ 26-11-2020 ರಂದು ಆತ ತಾನು ಚಾಸಾ.32, 29, 19 ಬಂದಿದ್ದರು. ಆ ದಿನ ಬೇಳಿಗ್ಗೆ 11.30 ಗಂಟೆಗೆ ಧಾರವಾಡದ ಮಾರುತಿ ದೇವಸ್ಥಾನದ ಸಂಗಮ ಸರ್ಕಲ್ ಬಳಿ ಬಾತ್ಮಿದಾರ ತೋರಿಸಿದ ಮೇರೆಗೆ ಆರೋಪಿ ನಂ. 3 ಮತ್ತು ಲಾಲು ಮತ್ತು ಇಂಜುಮಾಮ ಇರಾನಿ ಅಲ್ಲಿ ಇದ್ದರು. ಅವರನ್ನು ಸುತ್ತುವರೆದು ಹಿಡಿದುಕೊಂಡೇವು. ಆಗ ಅವರಿಂದ ಸ್ವಲ್ಪ ದೂರದಲ್ಲಿ ಇದ್ದ 1 ನೇ ಆರೋಪಿ ಸಲಿಂ ಕೆಂದ್ರ ಕಾರಾಗ್ರುಹ ವಿಸಿ ಅಲ್ಲಿ ಹಾಜರಿರುವ ಆರೋಪಿತ ಏಕಾಏಕಿ ಚಾಕು ಮತ್ತು ಬಿಯರ್ ಬಾಟಲಿಗಳಿಂದ ಹಲ್ಲೆ ಮಾಡಿರುತ್ತಾನೆ ಅದರಿಂದ ಚಾಸಾ.32 ರವರಿಗೆ ಏಡ ಬುಜಕ್ಕೆ ಬಿಯರ್ ಬಾಟಲ ತಾಗಿ ಗಾಯ ವಾಗಿರುತ್ತದೆ ಮತ್ತು ತಲೆಗೆ ರಕ್ತಗಾಯವಾಗಿತ್ತು ಮತ್ತು ಬಲ ಕಣ್ಣಿಗೆ ಪೆಟ್ಟಾಗಿತ್ತು. ಅದೇ ರೀತಿ ಚಾಸಾ.28 ರವರಿಗೆ 1 ನೇ ಆರೊಪಿತನ ಹಲ್ಲೆಯಿಂದ ತಲೆಗೆ ಗಾಯವಾಗಿರುತ್ತದೆ. ಎಲ್ಲಾ ಆರೋಪಿತರು ಸೇರಿ ಅವರ ಮೇಲೆ ಹಲ್ಲೆ ಮಾಡಿರುತ್ತಾರೆ. ಜನರ ಗುಂಪಿನಲ್ಲಿ ಆರೋಪಿತರು

ಅವರಿಂದ ತಪ್ಪಿಸಿಕೊಂಡು ಓಡಿ ಹೋಗಿರುತ್ತಾರೆ. ಚಾಸಾ.32 ರವರಿಗೆ ಭಾರಿಗಾಯವಾಗಿ ರಕ್ತ ಬರುತ್ತಿದ್ದ ಕಾರಣ ತತ್ವದರ್ಶಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಆರೋಪಿತರಿಗೆ ಅವರು ಬೆಂಗಳೂರ ಪೊಲೀಸರು ಎಂದು ಗುರುತಿನ ಚೀಟಿ ತೋರಿಸಿದರು ಕೂಡಾ ಅವರ ಮೇಲೆ ಹಲ್ಲೆ ಮಾಡಿರುತ್ತಾರೆ. ಆ ಕುರಿತು ಎ ಎಸ್ ಐ ರವಿಕುಮಾರ ವಿದ್ಯಾಗಿರಿ ಪೊಲೀಸ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. 1 ನೇ ಆರೊಪಿತ ಧಾರವಾಡದ ಪೊಲೀಸರು ಬೇರೆ ಪ್ರಕರಣದಲ್ಲಿ ಬಂಧಿಸಿದ್ದರು ಅದರ ಮಾಹಿತಿ ಮೇರೆಗೆ ಅವರು ಮಾಗಡಿ ರಸ್ತೆ ಪೊಲೀಸ ಠಾಣೆ ಗುನ್ನಾ ಸಂ.158/2020 ಮತ್ತು 169/2020 ರ ಪ್ರಕರಣಗಳಲ್ಲಿ ಸದರಿ ಆರೋಪಿತರನ್ನು ಬಾಡಿ ವಾರಂಟ ಮೇಲೆ ಪಡೆದು ನಂತರ ಆರೋಪಿತರನ್ನು ಅವರ ಪಲೀಸ ಕಸ್ಟಡಿಗೆ ದಿಃ 02-12-2020 ರಂದು ಪಡೆದುಕೊಂಡಿರುತ್ತೆವೆ. ಆರೋಪಿತರ ವಿಚಾರಣೆ ಕಾಲಕ್ಕೆ ಬೆಂಗಳೂರು ನಗರ ಇತರ ಕಡೆ ದರೋಡೆ, ಸುಲಿಗೆ, ಒಂಟಿ ಮಹಿಳೆಯರ ಕತ್ತುಗಳಿಂದ ಸರಗಳ್ಳತನ ಮಾಡಿರುತ್ತೆವೆ ಎಂದು ಓಪ್ಪಿಕೊಂಡಿರುತ್ತಾರೆ. 1 ನೆ ಆರೋಪಿತ ನೀಡಿದ ಮಾಹಿತಿ ಮೇರೆಗೆ ಧಾರವಾಡದ ಇರಾನಿ ಕಾಲೋನಿಗೆ ನಾನು ಚಾಸಾ.39, 33, ಕೃಷ್ಣಪ್ಪ, ರವಿಕುಮಾರ, ದಿನೇಶ, ಶೀವಕುಮಾರ, ಲಕ್ಷ್ಮಿ, ಪ್ರತಿಭಾ ಇನ್ನಿಬ್ಬರೂ ಮಹಿಳಾ ಸಿಬ್ಬಂದಿಯೊಂದಿಗೆ ಒಟ್ಟು 14 ಜನ ಬಂದಿದ್ದೇವು. ಅಲ್ಲಿ ಅವನು ಇರಾನಿ, ಆಜಾದ ಇರಾನಿ, ಪಾತಿಮಾ ಬೇಗಂ, ಗುಲ್ಜಾ ಬೆಗಮ್, ಬಾನು ರವರನ್ನು ನಮ್ಮ ವಶಕ್ಕೆ ಪಡೆದುಕೊಂಡಿರುತ್ತೆವೆ. ದಿಃ 11-12-2020 ರಂದು ಬೆಂಗಳೂರಿಗೆ ಆರೋಪಿತರ ಸಮೇತ ಹೋಗಿರುತ್ತಾರೆ. ಸದರಿ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಪೊಲೀಸ ಕಸ್ಟಡಿಗೆ ಪಡೆದುಕೊಂಡಿರುತ್ತೆವೆ. ಎಲ್ಲಾ ಆರೋಪಿತರು ಬೆಂಗಳೂರು ನಗರ

ಮತ್ತು ಇತರ ಕಡೆ ಕಳ್ಳತನ ಮಾಡಿದ ಬಗ್ಗೆ ಓಪ್ಪಿಕೊಂಡಿರುತ್ತಾರೆ ಮತ್ತು ಧಾರವಾಡದಲ್ಲಿ ಕಳ್ಳತನ, ಸುಲಿಗೆ ಮಾಡಿದ ಒಡವೆಗಳನ್ನು ಧಾರವಾಡದ ಬಂಗಾರವನ್ನು ಮಾರಾಟ ಮಾಡಿದ ಬಗ್ಗೆ ಹೇಳಿರುತ್ತಾರೆ. ನಂತರ ಮೇಲಾಧಿಕಾರ ಸೂಚನೆಯಂತೆ ದಿಃ 17-12-2020 ರಂದು ಪಾತಿಮಾ, ಬಾನು ಇರಾನಿ ಅವರು ಬಂಗಾರದ ಆಭರಣಗಳನ್ನು ಮಾರಾಟ ಮಾಡಿದ ಅಂಗಡಿಗಳನ್ನು ತೋರಿಸುತ್ತೆವೆ ಎಂದು ಹೇಳಿದ ಕಾರಣ ಅವರನ್ನು ಕರೆದುಕೊಂಡು ಮಹಿಳಾ ಪೊಲೀಸ ಸಿಬ್ಬಂದಿಯೊಂದಿಗೆ ಧಾರವಾಡಕ್ಕೆ ಬಂದಿದ್ದೇವು. ದಿಃ 19-12-2020 ರಂದು ಕಾಮಾಕ್ಷಿ ಜುವ್ಯಲರ್ ಅಲ್ಲಿ 230 ಗ್ರಾಂ, ದಿಃ 20-12-2020 ರಂದು ಗಣಪತಿ ಜುವ್ಯಲರಿ ಅಲ್ಲಿ 549 ಗ್ರಾಂ, ಅದೇ ದಿನ ಕೊಯಿನುರ್ ಜುವ್ಯಲರಿ 99 ಗ್ರಾಂ ಆಭರಣಗಳು ರಿಕವರಿ ಆಗಿರುತ್ತವೆ. ದಿಃ 29-12-2020 ರಂದು ವರುಣಾ ಪ್ಯಾಲೇಸ ನಲ್ಲಿ 140 ಗ್ರಾಂ ಆಭರಣಗಳು ರಿಕವರಿ ಆಗಿರುತ್ತವೆ. ದಸ್ತಗಿರಿ ಮಾಡಿದ ಆರೋಪಿತರನ್ನು ರಿಕವರಿ ಮಾಡಿದ ಆಭರಣಗಳನ್ನು ನೋಡಿದರೆ ಗುರುತಿಸುತ್ತೆನೆ. ನಿ.ಪಿ.11 ಮತ್ತು 12 ಪೋಟೋಗಳನ್ನು ಬಂಗಾರದ ಆಭರಣಗಳನ್ನು ಅಮಾನತ್ತು ಪಡಿಸಿಕೊಳ್ಳುವ ಸಂದರ್ಬದಲ್ಲಿ ತೆಗೆದ ಪೋಟೊಗಳಾಗಿರುತ್ತವೆ. ಆಭರಣಗಳನ್ನು ಅಮಾನತ್ತು ಮಾಡುವ ಕಾಲಕ್ಕೆ ಪಂಚನಾಮೆ ಮಾಡಿರುತ್ತೆವೆ. ಈಗ ನೋಡುತ್ತಿರುವ ಪೊಟೊ ಜಪ್ತಾದ ಆಭರಣಗಳ ಪಿರ್ಯಾದಿದಾರರ ವಾರಸುದಾರರಿಗೆ ಹಿಂದಿರುಗಿಸುವ ಸಮಯದಲ್ಲಿ ತೆಗೆಯಲಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೊಪಿಯನ್ನು ಗುರುತಿಸುತ್ತೆನೆ ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 8)** ಪ್ರಸಾ-13 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 29-05-2020 ರಂದು ಆತ ಠಾಣೆಯ ಎಸ್ ಎಚ್ ಓ ಎಂದು ಕೆಲಸ ಮಾಡುತ್ತಿದ್ದೆನು. ಆ ದಿನ ರಾತ್ರಿ 8.30 ವರಗೆ ಚಾಸಾ.1 ರವರು ಹೇಳಿ ಬರೆಯಿಸಿದ ದೂರು ನೀಡಿದ್ದು ಅದನ್ನು ಸ್ವೀಕರಿಸಿ ಪ್ರಥಮ ವರ್ತಮಾನ ವರದಿಯನ್ನು ಅಪರಾದ ಸಂ.34/2020 ಎಂದು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದೂರಿನ ಸಮೇತ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೆನೆ. ನಿ.ಪಿ.1 ರಲ್ಲಿ ಆತನ ಸಹಿ ಇರುತ್ತದೆ. ಅದನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಎಫ್ ಐ ಆರ್ ನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ.ಪಿ.14 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು. ಅದೇ ದಿನ ಪ್ರಕರಣವನ್ನು ಪೊಲೀಸ ಇನ್ಸಪೇಕ್ಟರವರಿಗೆ ತನಿಖೆಗೆ ಓಪ್ಪಿಸಿರುತ್ತೆನೆ ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 9)** ಪ್ರಸಾ-14 ರವರು ತಮ್ಮ ಸಾಕ್ಷ್ಯದಲ್ಲಿ ಮಾಗಡಿ ಪೊಲೀಸ ಠಾಣೆ ಅಪರಾದ ಸಂ.159/2020 ರಲ್ಲಿ ಆರೋಪಿತರ ಪತ್ತೆಗಾಗಿ ನಿರಾತರಾಗಿದ್ದಾಗ ಬಾತ್ಮಿದಾರರಿಂದ ಮಾಹಿತಿ ಬಂದ ಮೇರೆಗೆ ಧಾರವಾಡದ ಇರಾನಿ ತಂಡದಿಂದ ಬೆಂಗಳೂರು ನಗರದಲ್ಲಿ ಸರಗಳ್ಳತನ ನಡೆಯುತ್ತಿದ್ದು ಈ ಸಂಬಂದ ಆರೋಪಿತರನ್ನು ದಸ್ತಗಿರಿ ಮಾಡುವಂತೆ ವಿಜಯ ನಗರ ಉಪವಿಭಾಗ ರವರು ಎ ಸಿ ಪಿ ಅವರು ಅಪರದಿ ಪತ್ತೆ ತಂಡವನ್ನು ರಚಿಸಿದರು. ಅದರಂತೆ ಪತ್ತೆ ತಂಡವು ಧಾರವಾಡ ನಗರದ ಆರೋಪಿತರನ್ನು ಪತ್ತೆಗಾಗಿ ಚಾಸಾ.19, 26 ರಿಂದ 30 ರವರೆಗೆ ಸಿಬ್ಬಂದಿಯನ್ನು ಕಳುಹಿಸಿದ್ದೆನು. ಆ ಸಂದರ್ಬದಲ್ಲಿ ಬಿಲಾಲ ಇರಾನಿ ಧಾರವಾಡ ನಗರ ಪೊಲೀಸ ಠಾಣೆ ವಾಪ್ತಿಯಲ್ಲಿ ಪೊಲೀಸರ ಮೇಲೆ ಕೈಯಿಂದ ಹಾಗೂ ಬಾಟಲ್ ಗಾಜು ನಿಂದ ಹಲ್ಲೆ ಮಾಡಿರುತ್ತಾನೆ. ಆತನ ಜೊತೆ 3 ಜನ ಇದ್ದು ಅವರು ತಪ್ಪಿಸಿಕೊಂಡು ಓಡಿ ಹೋಗಿರುತ್ತಾರೆ. ಆ ಹಲ್ಲೆಯಿಂದ ಚಾಸಾ.28 ರಿಂದ 30 ಇವರಿಗೆ ಪೆಟ್ಟು ಮತ್ತು ಗಾಯ ವಾಗಿರುತ್ತದೆ. ಸದರಿ ಹಲ್ಲೆ ಕುರಿತು ಧಾರವಾಡ ನಗರ ಪೊಲೀಸ ಠಾಣೆಯಲ್ಲಿ ಗುನ್ನಾ ಸಂ.104/2020 ಒಂದು ದಾಖಲೆ ಆಗಿರುತ್ತದೆ. ಆ ಸಮಯದಲ್ಲಿ ಸಮಿರ ಇರಾನಿಯನ್ನು ನಮ್ಮ ಸಿಬ್ಬಂದಿ ಬಂದಿಸಿದ್ದರು. ತದ ನಂತರ ಬೆಂಗಳೂರಿನ 3 ನೇ ಎಸಿಎಮ್ ಎಮ್ ನ್ಯಾಯಾಲಯದಿಂದ ಆರೋಪಿತರ ಪೊಲೀಸ ಬಂದನಕ್ಕೆ

ಕೇಳಿರುತ್ತೆವೆ. ಆತನನ್ನು ನಮ್ಮ ವಶಕ್ಕೆ ಪಡೆದು ದಿಃ 03-12-2020 ರಂದು ಆತನ ಸ್ವಇಚ್ಚೆ ಹೇಳಿಕೆಯನ್ನು ಪಡೆದಿರುತ್ತೆನೆ. ಆತ ತನ್ನ ಸ್ವಇಚ್ಚೆ ಹೇಳಿಕೆಯಲ್ಲಿ ಸಂಗಡಿಗರಾದ ಆರೋಪಿ 1, ಆರೋಪಿ 2 ಇತರರೊಂದಿಗೆ ಬೆಂಗಳೂರಿನ ನಗರ ಹಾಗೂ ಧಾರವಾಡ ನಗರದಲ್ಲಿ ಒಂಟಿ ಮಹಿಳೆಯರ ಗುರುತಿಸಿ ಸರಗಳ್ಳತನ ಅಪರಾಧ ಮಾಡುತ್ತಿರುವದಾಗಿ ಅಪರಾದ ಮಾಡಿರುವುದಾಗಿ ಹೇಳಿರುತ್ತಾನೆ ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 10)** ಪ್ರಸಾ-14 ರವರು ಮುಂದುವರೆದುತಮ್ಮ ಸಾಕ್ಷ್ಯದಲ್ಲಿ ಸಾಕ್ಷೀಯು ಆರೋಪಿತನ ತಪ್ಪೊಪ್ಪಿಗೆ ಹೇಳಿಕೆಯನ್ನು ಗುರುತಿಸಿದ್ದೇನೆ ಅದನ್ನು Ex.p15 ಎಂದು ಗುರುತಿಸಲಾಗಿದೆ. ಆರೋಪಿ ನಂ.1 ತಾನು ಕದ್ದ ವಸ್ತುಗಳ ಹಣವನ್ನು 03 ನೇ ಆರೋಪಿತನ ಹೆಂಡತಿಯಾದ 04 ನೇ ಆರೋಪಿತಳಿಗೆ ನೀಡಿರುತ್ತಾನೆಎಂದು ಹೇಳಿರುತ್ತಾನೆ. 01 ನೇ ಆರೋಪಿತ ಮತ್ತು ಆತನ ಸಂಗಡಿಗರು ಧಾರವಾಡ ವಿದ್ಯಾಗಿರಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿರುತ್ತಾನೆಂದು ತಪ್ಪು ಒಪ್ಪಿಕೊಂಡಿರುತ್ತಾನೆ. ದಿಃ 11.12.2020 ರಂದು ಪಿ.ಡಬ್ಲೂ - 14 ಮತ್ತು

ಚಾ.ಸಾ.13 ರಿಂದ 33 ರ ಆರೋಪಿತ ಪತ್ತೆಗಾಗಿ ಧಾರವಾಡಕ್ಕೆ ಬಂದಿದ್ದು. ಅಬು ಇರಾಣಿ, ಪಾತೀಮಾ ಮತ್ತು ಗುಲಜಾರ್ ಬೇಗಂ ರವರನ್ನು ದಸ್ತಗಿರಿಮಾಡಿದ್ದು ಅದೇ ದಿನ 02 ನೇ ಆರೋಪಿತನ ತಪ್ಪ ಒಪ್ಪಿಗೆ ಹೇಳಿಕೆ ಪಡೆದಿದ್ದು ಅದನ್ನು ನಿ.ಪಿ.16 ಎಂದು ಗುರುತಿಸಲಾಯಿತು. 04 ನೇ ಆರೋಪಿತಳ ಸ್ವಇಚ್ಚ ಹೇಳಿಕೆಯ ದಾಖಲಿಸಿದ್ದು ಆಕೆ ತನ್ನ ಸ್ವಖುಷಿ ಹೇಳಿಕೆಯಲ್ಲಿ 01 ನೇ ಆರೋಪಿತ ನೀಡಿದ ಬಂಗಾರದ ಆಭರಣಗಳನ್ನ ಧಾರವಾಡದ ಮೂರು-ನಾಲ್ಕು ಅಂಗಡಿಗಳಲ್ಲಿ ಮಾರಾಟ ಮಾಡಿರುತ್ತೇನೆಂದು ತಪ್ಪು ಒಪ್ಪಿಕೊಂಡಿರುತ್ತಾಳೆ. 02 ನೇ ಆರೋಪಿತ ತನ್ನ ಸ್ವಖುಷಿ ಹೇಳಿಕೆಯಲ್ಲಿ ಆತ 01 ನೇ ಆರೋಪಿತನೊಂದಿಗೆ ಕಳ್ಳತನ ಮಾಡಿದ್ದ, ಕಳ್ಳತನ ಮಾಡಿದ್ದ ಆಭರಣಗಳನ್ನು 04 ನೇ ಆರೋಪಿಳಗೆನೀಡಿರುತ್ತೇನೆಂದು ಹೇಳಿರುತ್ತಾನೆ. ದಿಃ17.12.2021 ರಂದು ಪಿ.ಡಬ್ಲೂ- 14 ತನ್ನ ಸಿಬ್ಬಂದಿಯೂಂದಿಗೆ 04 ನೇ ಆರೋಪಿತಳನ್ನು ಧಾರವಾಡಕ್ಕೆ ಕರೆದುಕೊಂಡು ಬಂದಿದ್ದು. ದಿಃ20.12.2020 ರಂದು ಚಾಸಾ .04 ಮತ್ತು 05 ರವರ ಸಮಕ್ಷಮ ಗಣಪತಿ ಜುವೆಲರ್ಸನಲ್ಲಿ ಪಂಚನಾಮೆ ಮಾಡಿ 16 ಬಂಗಾರದ ಆಭರಣಗಳನ್ನು ಒಟ್ಟು 549 ಗ್ರಾಂ ಅನ್ನು ನಿ.ಪಿ.10 ರ ಪ್ರಕಾರ ಜಪ್ತು ಪಡಿಸಿಕೊಂಡಿರುತ್ತೇನೆ ಎಂದು ಹೇಳಿರುತ್ತಾನೆ. ನಿ.ಪಿ.11 ಮತ್ತು 12 ಪೋಟೊಗಳನ್ನು ಆಸಮಯದಲ್ಲಿ ತೆಗೆಯಲಾಗಿರುತ್ತದೆ. ಅದೇ ದಿನ ಗಣಪತಿ ಜುವೆಲರ್ಸನ ಮಾಲೀಕ ವೆಂಕಟೇಶ ಪಾಲನಕರ್ ಅವರ ಹೇಳಿಕೆ ಪಡೆದಿರುತ್ತೇನೆ. ಸದರಿ ಆಭರಣಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 03 ನೇ ಎಸಿ ಎಂಎಂ ಬೆಂಗಳೂರು ನ್ಯಾಯಾಲಯ ಇವರ ಆದೇಶದಂತೆ ದಿಃ06.03.2021 ರಂದು ಸಿ.ಡಬ್ಲೂ-1 ರವರ ಆಭರಣಗಳನ್ನು ಅವರಿಗೆ ಬಿಡುಗಡೆಗೋಳಿಸಿರುತ್ತೇನೆ. ಆ

ಸಮಯದಲ್ಲಿ ನಿ.ಪಿ.05 ಮತ್ತು 06 ರಂತೆ ಪೋಟೊಗಳನ್ನು ತೆಗೆಯಲಾಗಿರುತ್ತದೆ. ನ್ಯಾಯಾಲಯದಲ್ಲಿ 01 ರಿಂದ 04 ನೇ ಆರೋಪಿತರು ಇರತ್ತಾರೆಂದು ಗುರುತಿಸುತ್ತಾರೆ ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋೀಪಿಃ

2.ನೇ ಆರೋೀಪಿಃ

3.ನೇ ಆರೋೀಪಿಃ

4.ನೇ ಆರೋೀಪಿಃ

**ಪ್ರಶ್ನೆ 11)** ಪ್ರಸಾ-15 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 30-05-2020 ರಂದು ಗುನ್ನಾ ಸಂ.34/2020 ರ ತನಿಖೆಯನ್ನು ಚಾಸಾ.38 ರವರಿಂದ ಕಪಡೆದುಕೊಂಡಿರುತ್ತೆನೆ. ಘಟನಾ ಸ್ಥಳ ಪಂಚನಾಮೆ ಮಾಡುವ ಸಲುವಾಗಿ ಚಾಸಾ.2 ಮತ್ತು 3 ರವರನ್ನು ಕರೆಯಿಸಿ ಚಾಸಾ.1 ರವರ ತೋರಿಸಿದ ಘಟನಾ ಸ್ಥಳವನ್ನು ಅವರ ಸಮಕ್ಷಮ ಪಂಚನಾಮೆ ಮಾಡಿರುತ್ತೆನೆ. ಸದರಿ ಪಂಚನಾಮೆಯಲ್ಲಿರುವ ಸಹಿ ನಿ.ಪಿ.2(ಡಿ) ಎಂದು ಗರುತಿಸಲಾಯಿತು. ಘಟನಾ ಸ್ಥಳದ ಪೋಟೊವನ್ನು ಈಗಾಗಲೇ ನಿ.ಪಿ.3 ಮತ್ತು 4 ಎಂದು ಗರುತಿಸಲಾಗಿರುತ್ತದೆ. ಪೋಟೊಗಳ ಜೊತೆಗೆ ಸಿಡಿಯನ್ನು ನೀಡಿರುತ್ತೆನೆ ಅದನ್ನು ನಿ.ಪಿ.18 ಎಂದು ಗುರುತಿಸಲಾಯಿತು. ಚಾಸಾ.10, 6 ಹಾಗೂ ಶ್ರೀಮತಿ ಕ್ರುಶಿಲ್ಡಾ ಅಮನ್ನಾ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೆನೆ. 30-12-2020 ರಂದು ಬೆಂಗಳೂರ ಮಾಗಡಿ ಪೊಲೀಸ ಠಾಣೆ ಅಪರಾದ ಸಂ.159/2020

ರಲ್ಲಿ ಅವರ ವಿಚಾರಣೆಯಲ್ಲಿ ಠಾಣಾ ಗುನ್ನಾ ಸಂ.34/2020 ರ ಹಾಗೂ 19/2019 ರಲ್ಲಿ ಭಾಗಿಯಾದ ಬಗ್ಗೆ ಒಪ್ಪಿಕೊಂಡಿರುತ್ತಾರೆ ಎಂದು ಇ-ಮೇಲ್ ನಮ್ಮ ಠಾಣೆಗೆ ಬಂದಿದ್ದು ಅದನ್ನು ಸ್ವಿಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ. ದಿಃ21-01-2021 ರಲ್ಲಿ ಮಾನ್ಯ ನ್ಯಾಯಾಲಯದಿಂದ ಬಾಡಿವಾರಂಟ್ ಪಡೆದುಕೊಂಡು, ದಿಃ 04-02-2021 ರಂದು 1 ಮತ್ತು 2 ರವರನ್ನು ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವರನ್ನು ಪಿಸಿ ಕಸ್ಟಡಿಗೆ ಪಡೆದುಕೊಂಡು ಅವರನ್ನು ಠಾಣೆಯಲ್ಲಿ ದಸ್ತಗಿರಿ ನಿಯಮ ಪಾಲನೆ ಮಾಡಿ ಸ್ವಖುಷಿ ಹೇಳಿಕೆ ಪಡೆದುಕೊಂಡಿರುತ್ತೆನೆ. ಆರೋಪಿ 1 ಮತ್ತು 2 ತಮ್ಮ ಸ್ವಖುಷಿ ಹೇಳಿಕೆಯಲ್ಲಿ ಬೈಕ ಮೇಲೆ ಹೋಗಿ ಒಂಟಿ ಮಹಿಳೆ ಇದ್ದಲ್ಲಿ ಅವರ ಕೊರಳಲ್ಲಿ ಇದ್ದ ಸರಗಳ್ಳತನ ಮಾಡುತ್ತಾರೆ ಎಂದು ಹೇಳಿದರು. ಆರೊಪಿತರು ತಾವು ಮಾಡಿದ ಸರಗಳ್ಳತನ ಜಾಗ ತೋರಿಸುತ್ತೆವೆ ಎಂದು ಹೇಳಿದರು ಅದರ ಮೇರಿಗೆ ಸದರಿ ಗುನ್ನಾ ಸ್ಥಳಗಳಿಗೆ ಕರೆದುಕೊಂಡು ಹೋಗಿ ಪಂಚನಾಮೆ ಮಾಡಿರುತ್ತೆನೆ. ಸದರಿ ಹೇಳಿಕೆಗಳನ್ನು ನಿ.ಪಿ.19 ಮತ್ತು 20 ಎಂದು ಗುರುತಿಸಲಾಯಿತು. ಸರಗಳ್ಳತನ ಮಾಡಿದ ಬಗ್ಗೆ ಸ್ಥಳ ಪಂಚನಾಮೆ ಬಗ್ಗೆ ಇಬ್ಬರು ಪಂಚರನ್ನು ಕರೆಯಿಸಿಕೊಂಡು ಚಾಸಾ.8 ಮತ್ತು 9 ಅವರ ಸಮಕ್ಷಮದಲ್ಲಿ ಘಟನಾ ಸ್ಥಳ ನೀಲಿ ಪಂಚನಾಮೆ ಮಾಡಿರುತ್ತೆನೆ. ಅದನ್ನು ಈಗಾಗಲೇ ನಿ.ಪಿ.9 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಸಹಿಯನ್ನು ನಿ.ಪಿ.9(ಸಿ) ಎಂದು ಗುರುತಿಸಲಾಯಿತು. ಸದರಿ ಘಟನಾ ಸ್ಥಳದ ಪೊಟೊಗಳನ್ನು ಈಗಾಗಲೇ ನಿ.ಪಿ.7 ಮತ್ತು 8 ಎಂದು ಗುರುತಿಸಲಾಗಿರುತ್ತದೆ. ಸಿಡಿಯನ್ನು ನಿ.ಪಿ.21 ಎಂದು ಗುರುತಿಸಲಾಯಿತು. ಇಬ್ಬರು ಆರೋಪಿತರ ಬೆರಳು ಮುದ್ರೆ ಪಡೆದುಕೊಂಡಿರುತ್ತೆನೆ. ನಂತರ ಅವರನ್ನು ಅವರ

ಸಿಬ್ಬಂದಿ ಮುಖಾಂತರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ. ಅವರ ಸಿಬ್ಬಂದಿ ಆದ ಪಟಾತ ಹಾಗೂ ನರೇಂದ್ರ ಅವರಿಗೆ ಇನ್ನಿಬ್ಬರು ಆರೋಪಿತರನ್ನು ಪತ್ತೆ ಮಾಡಲು ಜ್ಞಾಪನ ನೀಡಿದ್ದು ಮತ್ತು ಅವರ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ. ಸಾಕ್ಷಿಗಳನ್ನು ಸಂಗ್ರಹಿಸಿದ ನಂತರ 24-03-2021 ರಂದು ಆರೋಪಿತರ ವಿರುದ್ದ ಅಪಾರದ ಮಾಡಿರುತ್ತಾರೆ ಎಂದು ಸಾಕ್ಷಿಗಳು ದೊರೆತಿರುತ್ತವೆ ಎಂದು ದೋಷಾರೊಪಣ ಪಟ್ಟಿಯನ್ನು ಸಲ್ಲಿಸಿರತ್ತೆನೆ. ದೋಷಾರೊಪಣ ಪಟ್ಟಿಯಲ್ಲಿ 3 ಮತ್ತು 4 ನೇ ಆರೋಪಿತರು ಪರಾರಿ ಆಗಿದ್ದು ಅವರ ವಿರುದ್ದ ವಾರಂಟ್ ಹೊರಡಿಸಲು ಕೇಳಿಕೊಂಡಿರುತ್ತೆನೆ. 2 ರಿಂದ 4 ಆರೊಪಿತ ನ್ಯಾಯಾಲಯದಲ್ಲಿ ಇರುತ್ತಾನೆ ಎಂದು ಗುರುತಿಸಿ ಎಂದು ಸಾಕ್ಷೀ ಹೇಳಿರುತ್ತಾರೇ, ನೀವು ಏನು ಹೇಳುತ್ತೀರೀ ?

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 12) ಃ ನಿಮಗೆ ಏನಾದರೂ ಹೇಳುವುದು ಇದೆಯಾ ?**

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**ಪ್ರಶ್ನೆ 13) ಃ ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?**

**ಉತ್ತರಃ**

1 ನೇ ಆರೋಪಿಃ

2.ನೇ ಆರೋಪಿಃ

3.ನೇ ಆರೋಪಿಃ

4.ನೇ ಆರೋಪಿಃ

**(ಮೇಲಿನ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಗಿದ್ದು ಅವರು ನೀಡಿದ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ)**

ದಿನಾಂಕಃ 08.04.2026.

(ಅಲಪ್ಪಾ ಮಹದೇವಪ್ಪ ಬಡಿಗೇರ)
3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಸಿಜೆಎಂ ಧಾರವಾಡ.